ಸ್ಮಶಾನದಲ್ಲಿ ಸಾವನ್ನಪ್ಪಿದ್ದವರೆಲ್ಲ ಹೆಚ್ಚಿನವರು ಯುವಕರು ಮತ್ತು ಕ್ರಿಯಾಶೀಲರಾಗಿದ್ದವರು. ಕಾಲೇಜು ಮುಗಿಸಿ ಪೇಟೆ ಪಟ್ಟಣಗಳಲ್ಲಿ ಓಡಾಡಿ, ಜನಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವರೇ ಎಲ್ಲರೂ. ಬಹಳ ಹಿಂದೆ ಓರ್ವ ಸರಕಾರಿ ನೌಕರನೂ ಸತ್ತಿದ್ದ. ಹೆಚ್ಚಿನವರ ತಲೆ ಒಡೆದು, ಬಾಯಿಯಿಂದ ರಕ್ತ ಹರಿದು ಹೋಗಿತ್ತು. ಈ ಎಲ್ಲರ ಮರಣದಲ್ಲಿ ಸಾಮ್ಯತೆಯಿದ್ದುದನ್ನು ಪ್ರದೀಪ ಕಂಡುಕೊಂಡ.

ತಾಲ್ಲೂಕು ಕೇಂದ್ರದಿಂದ ಹದಿನೈದು ಮೈಲು ದೂರದಲ್ಲಿದ್ದ ಆ ಊರಿನ ಪೇಟೆ ತುಂಬಾ ಚಿಕ್ಕದು. ಅದಕ್ಕೀಗ ದೆವ್ವದೂರು ಎಂಬ ಹೆಸರು ಅಂಟಿಕೊಂಡಿತ್ತು. ರಾಜ್ಯ ಹೆದ್ದಾರಿ ಹಾದು ಹೋಗುತ್ತಿದ್ದುದರಿಂದ ಬಸ್ಸುಗಳಿಗೆ ಬರವಿರಲಿಲ್ಲ. ಹಳೆಯದಾದ ಚಿಕ್ಕ ಬಸ್ಸು ತಂಗುದಾಣ, ಅದರ ಪಕ್ಕದಲ್ಲಿ ಅಗತ್ಯ ವಸ್ತುಗಳ ಅಂಗಡಿಗಳಿದ್ದವು. ಕೆಲ ವರ್ಷಗಳಿಂದ ಸಂಜೆಯಾಗುತ್ತಲೇ ಅಲ್ಲಿನ ಚಟುವಟಿಕೆಗಳು ಸ್ತಬ್ಧವಾಗುತ್ತಿದ್ದವು. ಹಳೆಯ ಸ್ಮಶಾನವೊಂದು ಒಳ ರಸ್ತೆಯಲ್ಲಿ ಸಾಗಿದರೆ ಸ್ವಲ್ಪ ದೂರಕ್ಕಿತ್ತು. ಆ ರಸ್ತೆಯಲ್ಲಿ ಹಾಕಿದ್ದ ಬೀದಿ ದೀಪಗಳು ಹಾಳಾಗಿ ಬೇತಾಳಗಳಂತೆ ನೇತಾಡುತ್ತಿದ್ದವು.

